ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೊಂದನೆಯ ಅಧಿವೇಶನ

ಮಂಗಳವಾರ, ದಿನಾಂಕ: 29ನೇ ಸೆಪ್ಟಂಬರ್, 2020

ಬಿ.ಡಿ.ಎ ನೌಕರರ ಕ್ಷೇಮಾಭಿವೃದ್ದಿ ಸಂಘಕ್ಕೆ ನೇಮಿತವಾಗಿರುವ ಆಡಳಿತಾಧಿಕಾರಿ ಕೈಗೊಂಡಿರುವ ಕ್ರಮಗಳು

ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು):-

945(1100) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬಿ.ಡಿ.ಎ ಎಂಪ್ಲಾಯಿಸ್ ವೆಲ್ಫೇರ್ ಅಸೋಸಿಯೇಷನ್‌ನಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಒಟ್ಟು ಎಷ್ಟು ತನಿಖೆಗಳು ನಡೆದಿವೆ; ಯಾರ್ಯಾರು ತನಿಖೆ ಮಾಡಿದ್ದಾರೆ ; (ವಿವರಗಳನ್ನು ನೀಡುವುದು)

(ಆ) ಸದರಿ ಸಂಘವು ಸಂಘಗಳ ನೋಂದಣಿ ಅಧಿನಿಯಮ 1960ರಡಿ ನೋಂದಾಯಿಸಿದ್ದರೂ ಸಂಘ ನೋಂದಾಯಿಸಿರುವ ನಿವೇಶನಗಳ ಕ್ರಯಪತ್ರಗಳಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಸಂಘದ ಕಾಯ್ದೆ 1959ರಡಿ ನೋಂದಾಯಿಸಿರುವ ಸಂಘ ಎಂದು ಸುಳ್ಳು ಮಾಹಿತಿ ದಾಖಲಿಸಿರುವುದು ನಿಜವೇ ; ಹಾಗಿದ್ದಲ್ಲಿ, ಸಂಘದ ವಿರುದ್ಧ ಕೈಗೊಂಡ ಕ್ರಮಗಳೇನು ;

(ಇ) ಸಂಘಕ್ಕೆ ಆಡಳಿತಾಧಿಕಾರಿಯನ್ನು ಯಾವ ದಿನಾಂಕದಂದು ನೇಮಿಸಲಾಗಿದೆ ; ನೇಮಿತ ಆಡಳಿತಾಧಿಕಾರಿ ಈವರೆಗೂ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಈ) ಸಂಘದಿಂದ ನಿವೇಶನ ಸಿಗದೇ ವಂಚನೆಗೊಳಗಾಗಿರುವ ಪ್ರಾಧಿಕಾರ ನಿವೃತ್ತ ನೌಕರರಿಗೆ ನಿವೇಶನಗಳನ್ನು ಒದಗಿಸಿಕೊಡುವ ದಿಸೆಯಲ್ಲಿ ಜರುಗಿರುವ ಕ್ರಮಗಳೇನು?